ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಶ್ರೀರಂಗಪಟ್ಟಣ.

ಓ.ಎಸ್. 171 / 2010

ಡಿ ಡಬ್ಲಿಯು : 07

ಸಾಕ್ಷಿದಾರರ ಹೆಸರು : ಜಯಚಂದ್ರ

ತಂದೆಯ/ಗಂಡನ ಹೆಸರು : ಲೇಟ್ ದಾಸೇಗೌಡ

ವಯಸ್ಸು : 65 ವರ್ಷ

ವೃತ್ತಿ : ವ್ಯವಸಾಯ

ವಾಸ : ಚಂದಗಿರಿಕೊಪ್ಪಲು.

ಸಾಕ್ಷಿಗೆ ದಿನಾಂಕ: 22.08.2016 ರಂದು ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ: ಪ್ರತಿವಾದಿ 7 ಮತ್ತು 8 ರವರ ಪರ ಸಿಆರ್‌ಎಸ್ ವಕೀಲರಿಂದ :

ನಾನು ಈ ಹಿಂದೆ ಕೃಷಿ ಇಲಾಖೆಯಲ್ಲಿ ಕೃಷಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದೆನು. ನಾನು ಸುಮಾರು 18 ವರ್ಷ ಕೃಷಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿದೆನು. ನಾನು ಈಗ 8 ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದೇನೆ. ಈ ಮುಂಚೆ ನಮಗೆ ಸೇರಿದ ಸ್ವತ್ತುಗಳನ್ನು ನಮ್ಮ ತಂದೆ ತಾಯಿ ವ್ಯವಸಾಯ ಮಾಡುತ್ತಿದ್ದರು. ನಮ್ಮ ತಂದೆ ತಾಯಿ ತೀರಿಹೋದ ನಂತರ ನಾನೇ ವ್ಯವಸಾಯ ಮಾಡುತ್ತಿದ್ದೇನೆ. ನಾನು ಸ್ವಂತ ಸಂಪಾದನೆ ಮಾಡಿರುವ ಸ್ವತ್ತನ್ನು ವ್ಯವಸಾಯ ಮಾಡುತ್ತಿದ್ದೇನೆ. ಸದರಿ ಸ್ವತ್ತು ಪಟ್ಟಸೋಮನಹಳ್ಳಿ ಗ್ರಾಮದ ಸರ್ವೆ ನಂಬರ್ ವಿಸ್ತೀರ್ಣ 16 ಗುಂಟೆ ಜಮೀನು. ನಾನು ಭತ್ತದ ವ್ಯಾಪಾರ ಮಾಡುತ್ತಿದ್ದೇನೆ. ಸದರಿ ಜಮೀನು ನನಗೆ 20 ವರ್ಷಗಳಿಂದ ಸ್ವಂತವಾಗಿ ಬಂದಿದೆ. ಆಗ ನಾನು ಸರ್ಕಾರಿ ಸೇವೆಯಲ್ಲಿ ಇರಲಿಲ್ಲ. ಸದರಿ ಅದಕ್ಕೆ ಸಂಬಂಧಪಟ್ಟ ಹಾಗೇ ರಿಜಿಸ್ಟರ್ ಪೇಪರ್ ಇರುತ್ತದೆ. ವಾದಿಯವರು ನನ್ನ ವಿರುದ್ದ ಹೂಡಿರುವ ಸಂಗತಿ ಗೊತ್ತಿದ್ದು ನಾನು ತಕರಾರು ಸಲ್ಲಿಸಿರುತ್ತೇನೆ. ರಾಮೇಗೌಡರ ತೀರಿಹೋದ ನಂತರ ನಮ್ಮ ಜಮೀನನ್ನು ನನ್ನ ತಾಯಿ

ನೋಡಿಕೊಳ್ಳುತ್ತಿದ್ದರು. ನನ್ನ ತಾಯಿ ಈಗ ಸುಮಾರು 8 ವರ್ಷಗಳ ಹಿಂದೆ ತೀರಿಕೊಂಡರು. ನನ್ನ ತಾಯಿ ತೀರಿಹೋದ ನಂತರ ಗೋವಿಂದೇಗೌಡ ನೋಡಿಕೊಳ್ಳುತ್ತಿದ್ದರು. ನಾನು ನನ್ನ ತಕರಾರನ್ನು ಗುರುತಿಸುತ್ತೇನೆ. ಸಾಕ್ಷಿಯೂ ತನ್ನ ಪ್ರತಿವಾದಿ ಪತ್ರವನ್ನು ನೋಡಿ ಅದರಲ್ಲಿರುವ ಸಹಿಯನ್ನು ಗುರುತಿಸುತ್ತಾರೆ. ಸಾಕ್ಷಿಗೆ ವಕಾಲತ್ತನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ಗುರುತಿಸುತ್ತಾರೆ. ಸದರಿ ರುಜುಗಳು ಕನ್ನಡ ಭಾಷೆಯದ್ದಾಗಿವೆ. ನನ್ನ ಇಲಾಖೆಯಲ್ಲಿಯೂ ಸಹಾ ನಾನು ಇದೆ ರೀತಿ ಸಹಿ ಮಾಡುತ್ತಿದ್ದೆನು. ನಾನು ಕೆಲಸಕ್ಕೆ ಸೇರುವ ಮುನ್ನಾ ಇಂಗ್ಲೀಷ್‌ನಲ್ಲಿ ಸಹಿ ಮಾಡುತ್ತಿದ್ದೆನು, ಸೇರಿದ ನಂತರ ಕನ್ನಡದಲ್ಲಿ ಸಹಿ ಮಾಡುತ್ತೇನೆ. ಪಾಲುಪಟ್ಟಿಯನ್ನು ನಾವು ದಿ. 22.02.1987 ರಂದು ರಾಮೇಗೌಡ , ಕೃಷ್ಣೇಗೌಡ , ಜಯಚಂದ್ರ ಮತ್ತು ಡಿ . ಗೋವಿಂದೇಗೌಡರಿಗೆ ನಮ್ಮ ತಂದೆ ತಾಯಿ ಮಾಡಿಕೊಟ್ಟಿದ್ದರು. ಸದರಿ ಪಾಲುಪಟ್ಟಿಗೆ ನಾನು ರಾಮೇಗೌಡ , ಕೃಷ್ಣೇಗೌಡ ಸಹಿ ಮಾಡಿರುತ್ತೇವೆ ಮತ್ತು ಸಾಕ್ಷಿದಾರರಾಗಿ ಕುಮಾರ್ ಬಿನ್ ತಿಮ್ಮೇಗೌಡ , ರಾಮಲಿಂಗಯ್ಯ , ಎಸ್ ಕೃಷ್ಣೇಗೌಡ ಮತ್ತು ವೈ. ದಾಸೇಗೌಡ ಸಹಿ ಮಾಡಿರುತ್ತಾರೆ.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದರು ಕಾಲಾವಕಾಶ ನೀಡಲಾಯಿತು.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಓ

ಸಿವಿಲ್ ಜಡ್ಜ್ (ಕಿ.ವಿ) ಮತ್ತು ಜೆಎಂಎಫ್‌ಸಿ.,
ಶ್ರೀರಂಗಪಟ್ಟಣ.